**Fax:** 08282-256262
**E-mail**:**kuvempuacademic@gmail.com**

Phone No - 08282-256149
**Website:**www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

**ಶೈಕ್ಷಣಿಕ ವಿಭಾಗ,** ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ, ಜ್ಞಾನ ಸಹ್ಯಾದ್ರಿ,
ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

---

ಸಂಖ್ಯೆ:ಕುವಿ:ಶೈವಿ:ಎಸಿ–6: 1907 :2022–23 ದಿನಾಂಕ:30–07–2022

## ಸುತ್ತೋಲೆ

**ವಿಷಯ: ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕ / ಸ್ನಾತಕೋತ್ತರ ವಿದ್ಯಾರ್ಥಿಗಳು ಪ್ರತಿ ವರ್ಷ ಆಗಸ್ಟ್–01 ರಂದು ಡಾ. ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆಯನ್ನು ವ್ಯಸನಮುಕ್ತ ದಿನಾಚರಣೆಯನ್ನಾಗಿ ಆಚರಿಸುವ ಬಗ್ಗೆ.**

ಉಲ್ಲೇಖ: ಸರ್ಕಾರದ ಅಧೀನ ಕಾರ್ಯದರ್ಶಿ, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಇವರ ಪತ್ರ ಸಂಖ್ಯೆ:ಕೆಸಿಐ–ಪಿಐಪಿ/121/2022 ಬೆಂಗಳೂರು, ದಿನಾಂಕ:23–05–2022.

*****

ಉಲ್ಲೇಖಿತ ಸರ್ಕಾರದ ಆದೇಶಾನುಸಾರ ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕ / ಸ್ನಾತಕೋತ್ತರ ವಿದ್ಯಾರ್ಥಿಗಳು ಪ್ರತಿ ವರ್ಷ ಆಗಸ್ಟ್–01 ರಂದು ಡಾ. ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆಯನ್ನು ವ್ಯಸನಮುಕ್ತ ದಿನಾಚರಣೆಯನ್ನಾಗಿ ಆಚರಿಸಲು ತಿಳಿಸಿರುವ ಹಿನ್ನೆಲೆಯಲ್ಲಿ **ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳ, ಸ್ನಾತಕೋತ್ತರ ಕೇಂದ್ರದ ವಿಭಾಗಗಳ, ಘಟಕ ಕಾಲೇಜುಗಳ ಹಾಗೂ ನೇರ ಆಡಳಿತಕ್ಕೊಳಪಟ್ಟ ಕಾಲೇಜುಗಳ ವಿದ್ಯಾರ್ಥಿಗಳು** ದಿನಾಂಕ:01–08–2022 ರಂದು **ವ್ಯಸನಮುಕ್ತ ದಿನಾಚರಣೆಯನ್ನಾಗಿ ಆಚರಿಸಲು** ಭಾಗವಹಿಸುವಂತೆ ತಿಳಿಸಲು ಎಲ್ಲಾ ವಿಭಾಗಾಧ್ಯಕ್ಷರುಗಳಿಗೆ / ಎಲ್ಲಾ ಕಾಲೇಜಿನ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಉಲ್ಲೇಖಿತ ಪತ್ರವನ್ನು www.kuvempu.ac.in. ರಲ್ಲಿ ಪರಿಚಲಿಸಲಾಗಿದೆ. ಅದರಂತೆ ಕಡ್ಡಾಯವಾಗಿ ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಲು ಮಾನ್ಯ ಕುಲಸಚಿವರಿಂದ ನಿರ್ದೇಶಿತನಾಗಿದ್ದೇನೆ.

ಮಾನ್ಯ ಕುಲಸಚಿವರ
ಅನುಮೋದನೆಯಾಗಿದೆ

ಉಪಕುಲಸಚಿವರು
ಉಪ ಕುಲಸಚಿವ
ಶೈಕ್ಷಣಿಕ ವಿಭಾಗ,
ಕುವೆಂಪು ವಿಶ್ವವಿದ್ಯಾಲಯ

ಗೆ,

1. **ಎಲ್ಲಾ ಸ್ನಾತಕೋತ್ತರ ಅಧ್ಯಯನ** ವಿಭಾಗಗಳ ಮುಖ್ಯಸ್ಥರು/ ಸಂಯೋಜನಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
2. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಕಡೂರು/ ಚಿಕ್ಕಮಗಳೂರು.
3. **ಎಲ್ಲಾ ಸ್ನಾತಕ** / ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಹಾಗೂ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳು, ಶಿವಮೊಗ್ಗ ಮತ್ತು ನೇರ ಆಡಳಿತಕ್ಕೊಳಪಟ್ಟ ಕಾಲೇಜು, ಶಂಕರಘಟ್ಟ.

ಪ್ರತಿಗಳು:

1. ಆಪ್ತ ಸಹಾಯಕರು, ಕುಲಪತಿಗಳು: ಕುಲಸಚಿವರು: ಕುಲಸಚಿವರು(ಪ): ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ಕಛೇರಿ ಪ್ರತಿ.

ದೂರವಾಣಿ: 08351-270244 ಓಂ ಶ್ರೀ ಗುರು ಬಸವಲಿಂಗಾಯ ನಮಃ ಸ.ದೂರವಾಣಿ: 9448139204

ರ.ನಂ.ಎ.-೧೩೩೮/ಬಿಜೆಪಿ/1955

ಚಿತ್ತರಗಿ ಶಿವಾನುಭವ ಚರವರ್ಯ

# ಶ್ರೀ ಮ.ನಿ.ಪ್ರ.ಡಾ: ಮಹಾಂತಶಿವಯೋಗಿಗಳವರು

# ಶ್ರೀ ವಿಜಯಮಹಾಂತೇಶ ಸಂಸ್ಥಾನಮಠ,

ತಾ: ಹುನಗುಂದ. **ಇಲಕಲ್ಲ**- ೫೮೭ ೧೨೫. ಜಿಲ್ಲಾ: ಬಾಗಲಕೋಟ.

ಶ್ರೀ ಮ.ನಿ.ಪ್ರ.ಗುರುಮಹಾಂತ ಸ್ವಾಮಿಗಳವರು ಚಿತ್ತರಗಿ ಶ್ರೀ ವಿಜಯ ಮಹಾಂತೇಶ ಸಂಸ್ಥಾನಮಠ,ಇಲಕಲ್ಲ.

ಮುಕ್ಕಾಂ: ಇಲಕಲ್ಲ. ದಿನಾಂಕ:16.07.2022.

ಕುವೆಂಪು ವಿಶ್ವವಿದ್ಯಾಲಯ ಜ್ಞಾನ ಸಹ್ಯಾದ್ರಿ 26 JUl 2022 ಶಂಕರಘಟ್ಟ-577451 ನಂ. 2906

ಗೆ,

ಮಾನ್ಯ ಕುಲಪತಿಗಳು ರವರಿಗೆ

ಇವರಿಗೆ ಶರಣು ಶರಣಾರ್ಥಿಗಳು,

ಇಂದು ದುಶ್ಚಟಗಳು ಅಧಿಕವಾಗಿ ಯುವಕರಿಂದ ಮುದುಕರವರೆಗೂ ಮತ್ತು ಕೆಲವು ಕಡೆ ಯುವತಿಯರೂ ದುಶ್ಚಟಕ್ಕೆ ದಾಸರಾಗಿ ತಮ್ಮ ಜೀವನ ಕೆಡಸಿಕೊಂಡು ಸಮಾಜಕ್ಕೆ ಹೊರೆಯಾಗುತ್ತಿದ್ದಾರೆ.

ಜನರ ದುಶ್ಚಟಗಳನ್ನು ಬಿಡಿಸುವದಕ್ಕಾಗಿಯೇ ತಮ್ಮ ಜೀವನವನ್ನು ಸಮರ್ಪಿಸಿಕೊಂಡಿರುವ ಇದರಿಂದ ಲಕ್ಷಾಂತರ ಕುಟುಂಬಗಳನ್ನು ಸಂರಕ್ಷಿಸಿದ ಶ್ರೀ ಮ.ನಿ.ಪ್ರ ಡಾ.ಮಹಾಂತ ಶಿವಯೋಗಿಗಳವರು, ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನಮಠ, ಚಿತ್ತರಗಿ ಇಲಕಲ್ಲ ಇವರ ಸೇವೆಯನ್ನು ಸರಕಾರ ಗುರುತಿಸಿ ಇವರ ಜನ್ಮದಿನ ಆಗಷ್ಟ 1 ರಂದು ವ್ಯಸನಮುಕ್ತ ದಿನಾಚರಣೆಯನ್ನಾಗಿ ಆಚರಿಸಲು ಆದೇಶಿಸಿದೆ. ( ಆದೇಶ ಪ್ರತಿ ಲಗತ್ತಿಸಿದೆ)

ಪ್ರಸ್ತುತ ಚಟಕ್ಕೆ ದಾಸರಾದವರನ್ನು ಬಿಡಿಸುವದು ಬಹಳ ಕಷ್ಟ ಅದಕ್ಕೆ ಬಹಳ ಪ್ರಯತ್ನಬೇಕು. ಇವತ್ತಿನ ವಿದ್ಯಾರ್ಥಿ ಸಮೂಹ ಮುಂದಿನ ಭವಿಷ್ಯದ ದಿನಗಳಲ್ಲಿ ಚಟಕ್ಕೆ ದಾಸರಾಗದಂತೆ ತಿಳುವಳಿಕೆ ನೀಡಿ ತಡೆಗಟ್ಟಿದರೆ ಮುಂದಿನ ಇಪ್ಪತ್ತು ವರ್ಷಗಳಲ್ಲಿ ಸಮಾಜ ವ್ಯಸನಮುಕ್ತವಾಗಬಹುದು.

ಅದಕ್ಕಾಗಿ ಈ ದಿನಾಚರಣೆಯ ಅಂಗವಾಗಿ ಎಲ್ಲ ಶಾಲಾ ಕಾಲೇಜು ಮತ್ತು ವಿಶ್ವವಿದ್ಯಾಲಯ ವಿದ್ಯಾರ್ಥಿಗಳಿಗೆ ದುಶ್ಚಟದಿಂದಾಗುವ ದುಷ್ಪರಿಣಾಮ ಕುರಿತು ನುರಿತ ತಜ್ಞರಿಂದ ಉಪನ್ಯಾಸ ಮಾಡಿಸಿ, ವಿದ್ಯಾರ್ಥಿಗಳಿಂದ ಶಿಕ್ಷಕರು ಪ್ರಮಾಣ ವಚನ ಸ್ವೀಕರಿಸುವದರಿಂದ ಪ್ರತಿ ವರ್ಷ ಸತತ 15-20 ವರ್ಷ ಈ ರೀತಿ ಮಾಡುವದರಿಂದ ನೈತಿಕ ಪ್ರಜ್ಞೆ ಇದ್ದವರು ದುಶ್ಚಟಕ್ಕೆ ದಾಸನಾಗುವದಿಲ್ಲ ಎಂದು ಗುರುಗಳಿಗೆ ವಚನ ಕೊಟ್ಟಿದ್ದೇವೆ ಎಂಬ ಭಾವ ಸದಾ ಇರುವುದರಿಂದ ಈ ಭಾವ ಅವನನ್ನು ದುಶ್ಚಟದಿಂದ ರಕ್ಷಿಸುತ್ತದೆ ಎಂಬ ಭರವಸೆ ನಮ್ಮ ಅನುಭವಕ್ಕೆ ಬಂದಿದೆ.

ಪ್ರಯುಕ್ತ ತಾವುಗಳು ಈ ದಿನಾಚರಣೆಯ ಅಂಗವಾಗಿ ತಮ್ಮ ಆಧೀನದಲ್ಲಿ ಬರುವ ಎಲ್ಲ ಪ್ರಾಥಮಿಕ, ಮಾಧ್ಯಮಿಕ ಪದವಿ ಪೂರ್ವ, ಪದವಿ ಮತ್ತು ವಿಶ್ವವಿದ್ಯಾಲಯಗಳ ವಿದ್ಯಾರ್ಥಿ ಸಮೂಹವನ್ನು ಗುರಿಯಾಗಿಸಿಕೊಂಡು ಅವರನ್ನು ದುಶ್ಚಟಗಳಿಂದ ತಡೆಗಟ್ಟುವ ಮಹಾಕಾರ್ಯ ತಮ್ಮಿಂದ ನಡೆಯಬೇಕೆಂದು ಕೋರುತ್ತೇವೆ.

ಆಗಷ್ಟ 1ರಂದು ಎಲ್ಲ ತರಹದ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳನ್ನು ಗುರಿಯಾಗಿಸಿಕೊಂಡು ವ್ಯಸನಮುಕ್ತ ದಿನಾಚರಣೆ ಆಚರಿಸಲು ಆದೇಶಿಸಬೇಕೆಂದು ವಿನಂತಿಸುತ್ತೇವೆ.

ತಮಗೆ ಬಸವಾದಿ ಶರಣರ ಕೃಪೆ ಸದಾ ಇರಲೆಂದು ಹಾರೈಸುತ್ತೇವೆ.

ಶ್ರೀ ಮ.ನಿ.ಪ್ರ.ಗುರುಮಹಾಂತಶ್ರೀಗಳು

ಚಿತ್ತರಗಿ ಶ್ರೀ ವಿಜಯ ಮಹಾಂತೇಶ ಸಂಸ್ಥಾನಮಠ, ಇಲಕಲ್ಲ.

Registrar's Personal Section To No 530 Date 27/7/22

1902

AC-6

HRM

<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ:- ಪ್ರತಿ ವರ್ಷ ಆಗಸ್ಟ್-01ರಂದು ಡಾ: ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆಯನ್ನು ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ವ್ಯಸನಮುಕ್ತ ದಿನಾಚರಣೆಯನ್ನಾಗಿ ಆಚರಿಸುವ ಬಗ್ಗೆ.

ಓದಲಾಗಿದೆ:-1. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂ: ಆಇ 41 ವೆಚ್ಚ-7/2022, ದಿ:05/04/2022.

2. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2022, ದಿ:04/04/2022.

3. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಇವರ ಏಕಕಡತ ಸಂ. ಕೆಎಸ್ ಟಿಬಿ/ಇಎಸ್ ಟಿ1/ಪಾ.ನ/2022-23, ದಿ: 05/05/2022.

******

ಪ್ರಸ್ತಾವನೆ:

ಮೇಲೆ ಕ್ರಮ ಸಂ (1)ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ 2022-23ನೇ ಸಾಲಿನ ಆಯವ್ಯಯದಲ್ಲಿ ವಾರ್ತಾ ಇಲಾಖೆಗೆ ಸಂಬಂಧಿಸಿದ ಅನುದಾನದ ವಿನಿಯೋಗ, ಯೋಜನೆ/ಕಾರ್ಯಕ್ರಮಗಳ ಅನುಷ್ಠಾನಕ್ಕೆ ವಿಶೇಷ ಸೂಚನೆಗಳನ್ನು ನೀಡಿದ್ದು, ಆಡಳಿತ ಇಲಾಖೆಗಳು ಸದರಿ ಸೂಚನೆಗಳ ಅನುಷ್ಠಾನಕ್ಕೆ ಅಗತ್ಯ ಕ್ರಮವಹಿಸುವಂತೆ ಸೂಚಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ 2022-23ನೇ ಸಾಲಿನಲ್ಲಿ ಮೊದಲನೇ ಮತ್ತು ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡಲು ಮತ್ತು ವೇತನ, ಭತ್ಯೆಗಳು ಹಾಗೂ ಕಛೇರಿ ನಿರ್ವಹಣೆ ಬಾಬ್ತುಗಳಿಗೆ ಆಯವ್ಯಯದ ಅವಕಾಶದವರೆಗೆ ಆರ್ಥಿಕ ಇಲಾಖೆಯ ಅನುಮತಿ ಇದೆಯೆಂದು ಭಾವಿಸಿ ಹಣ ಬಿಡುಗಡೆ ಮಾಡಲು ಸಂಬಂಧಿಸಿದ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಆರ್ಥಿಕ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.

ಚಿತ್ರದುರ್ಗ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನ ಮಠ, ಇಳಕಲ್ ಪೂಜ್ಯ ಲಿಂಗೈಕ್ಯ ಶ್ರೀ ಶ್ರೀ ಮ.ನಿ.ಪ್ರ. ಡಾ:ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆಯನ್ನು ಸರ್ಕಾರಿ ಕಾರ್ಯಕ್ರಮವಾಗಿ ಪ್ರತಿ ವರ್ಷ ಆಗಸ್ಟ್ 01 ರಂದು ವ್ಯಸನ ಮುಕ್ತ ದಿನಾಚರಣೆಯನ್ನಾಗಿ ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಆಚರಿಸುವ ಬಗ್ಗೆ ಆದೇಶ ನೀಡುವಂತೆ ಹಾಗೂ ಶ್ರೀ ಮ. ನಿ. ಪ್ರ. ಡಾ: ಮಹಾಂತ ಸ್ವಾಮಿಗಳ ಭಾವಚಿತ್ರ ಅನಾವರಣ ಮಾಡಿ, ಗೌರವ ವಂದನೆ ಅರ್ಪಿಸಿ ಜಿಲ್ಲಾಡಳಿತ , ಜಿಲ್ಲಾಪಂಚಾಯತ್ , ಆರೋಗ್ಯಇಲಾಖೆ, <u>ಶಿಕ್ಷಣ ಇಲಾಖೆ</u>, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮತ್ತು ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಮದ್ಯಪಾನ, ಮಾದಕದ್ರವ್ಯ, ತಂಬಾಕುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಜನಜಾಗೃತಿ ಜಾಥಾ ಹಾಗೂ ಸಮಾರಂಭ ಆಯೋಜಿಸಿ ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ತಜ್ಞರಿಂದ ಭಾಷಣ ಏರ್ಪಡಿಸಿ ಪ್ರತಿಜ್ಞಾ ವಿಧಿ ಕೈಗೊಳ್ಳುವ ಮೂಲಕ ಸಮಾರಂಭ ಆಯೋಜಿಸಲು ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಲಗತ್ತಿಸಿರುವ ಮಾರ್ಗಸೂಚಿ ಅನುಸರಿಸಿ ಕಾರ್ಯಕ್ರಮ ಆಯೋಜಿಸಲು ಮತ್ತು ಈ ಬಗ್ಗೆ ಸರ್ಕಾರದ ಆದೇಶ ಹೊರಡಿಸುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಇವರು ಸರ್ಕಾರವನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

<u>ಸರ್ಕಾರದ ಆದೇಶ ಸಂಖ್ಯೆ:ಕಸಿಐ-ಪಿಐಪಿ/121/2022</u> ಬೆಂಗಳೂರು,
ದಿನಾಂಕ: 23 /05/2022

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಮ.ನಿ.ಪ್ರ. ಡಾ:ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆಯನ್ನು ಪ್ರತಿ ವರ್ಷ ಆಗಸ್ಟ್-01ರಂದು ವ್ಯಸನ ಮುಕ್ತ ದಿನಾಚರಣೆಯನ್ನಾಗಿ ಅನುಬಂಧ-1ರಲ್ಲಿ ಲಗತ್ತಿಸಿರುವ ಕಾರ್ಯಕ್ರಮಗಳನ್ನೊಳಗೊಂಡು ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಆಚರಿಸುವಂತೆ ಹಾಗೂ ಆಯೋಜಿಸುವ ಸಮಾರಂಭದಲ್ಲಿ ಅನುಬಂಧ-2 ರಲ್ಲಿ ಲಗತ್ತಿಸಿರುವ ಪ್ರತಿಜ್ಞಾ ವಿಧಿ ಬೋಧಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚಿಸಿದೆ ಮತ್ತು ಸದರಿ ಸಮಾರಂಭವನ್ನು ಆಯೋಜಿಸಲು ತಗುಲುವ ವೆಚ್ಚವನ್ನು ಅನುಬಂಧ-3ರಲ್ಲಿ ಲಗತ್ತಿಸಿರುವಂತೆ ವಿತರಿಸಲು ಸರ್ಕಾರವು ಅನುಮತಿ ನೀಡಿ ಆದೇಶಿಸಿದೆ.

ಪು.ತಿ.ನೋ...

ಸದರಿ ವೆಚ್ಚವನ್ನು 2022-23ನೇ ಸಾಲಿನ ಲೆಕ್ಕಶೀರ್ಷಿಕೆ 2220-60-101-0-04 ಕರ್ನಾಟಕ ರಾ... ಅತ್ಮ ಸಂಯಮ ಬೋರ್ಡ್ 103- ಸಹಾಯಾನುದಾನ- ಸಾಮಾನ್ಯ ಅಡಿಯಲ್ಲಿ ಒದಗಿಸಿರು... ರೂ.50.00 ಲಕ್ಷಗಳ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 460 ವೆಚ್ಚ-7/2021 ದಿನಾಂಕ: 14/7/2021ರಲ್ಲಿ ನೀಡಿರುವ ಸಹಮತಿ ಮತ್ತು ಸರ್ಕಾರ ಆದೇಶ ಸಂ: ಆಇ 01 ಟಿಎಫ್‌ಪಿ 2022, ದಿ.04/04/2022ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾಗಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

M. Jacintha 23/5/2022

(ಎಂ. ಜೆಸಿಂತ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ.
(ವಾರ್ತಾ ಶಾಖೆ)

ಗೆ:

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)/(ಇ&ಆರ್‌ಎಸ್‌ಎ)/(ಎ&ಇ), ಬೆಂಗಳೂರು.
2. ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
4. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಬೆಂಗಳೂರು.
7. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ (5&7), ವಿಧಾನಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

## ಅನುಬಂಧ-1

### ಆಯೋಜಿಸಬೇಕಾದ ಕಾರ್ಯಕ್ರಮಗಳ ಪಟ್ಟಿ

1. ಶ್ರೀ ಮ.ನಿ.ಪ್ರ. ಡಾ: ಮಹಾಂತಸ್ವಾಮಿಗಳ ಭಾವಚಿತ್ರ ಅನಾವರಣ ಮಾಡಿ, ಗೌರವ ವಂದನೆ ಅರ್ಪಿಸುವುದು.
2. ಜಿಲ್ಲಾಡಳಿತ, ಜಿಲ್ಲಾಪಂಚಾಯತ್, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಮದ್ಯಪಾನ, ಮಾದಕವಸ್ತು, ತಂಬಾಕುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಜನ ಜಾಗೃತಿ ಜಾಥಾ ಹಾಗೂ ಸಮಾರಂಭ ಏರ್ಪಡಿಸಿ ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ತಜ್ಞರಿಂದ ಭಾಷಣ ಏರ್ಪಡಿಸುವುದು.
3. ಮದ್ಯಪಾನದಿಂದ ಉಂಟಾಗುವ ದುಷ್ಪರಿಣಾಮಗಳ ವಿಚಾರ, ಗಣ್ಯರ ಹೇಳಿಕೆ, ಅಂಕಿಅಂಶಗಳ ನುಡಿಗಳಿಂದ ಮಾಹಿತಿ ಪತ್ರವನ್ನು ಮುದ್ರಿಸಿ ಜನರಿಗೆ ವಿಶೇಷವಾಗಿ ಯುವಜನರಿಗೆ ಹಂಚುವುದು
4. ಪ್ರತಿ ತಾಲ್ಲೂಕಿನಲ್ಲಿ ಎಲ್ಲಾ ಕಾಲೇಜುಗಳಿಂದ ವಿದ್ಯಾರ್ಥಿಗಳನ್ನು ಆಹ್ವಾನಿಸಿ ಸ್ಪರ್ಧಾ ಚರ್ಚೆಯನ್ನು ನಡೆಸುವುದು. ಅದಕ್ಕೆ ಸಂಬಂಧಪಟ್ಟ ಭಿತ್ತಿಪತ್ರ ಮತ್ತು ಫ್ಲೆಕ್ಸ್‌ಗಳನ್ನು ಹಾಕುವುದು.
5. ಶಾಲಾ ಕಾಲೇಜು ಮಕ್ಕಳಿಗೆ ಪ್ರಬಂಧ ಸ್ಪರ್ಧೆ, ಚರ್ಚಾ ಸ್ಪರ್ಧೆ, ಏರ್ಪಡಿಸಿ ಬಹುಮಾನ ವಿತರಿಸುವುದು.
6. ಸ್ಥಳೀಯ ಪತ್ರಿಕೆಗಳಲ್ಲಿ ಲೇಖನ ಹಾಕಿಸುವುದು.
7. ದುಷ್ಪರಿಣಾಮಗಳ ಬಗ್ಗೆ ಫೋಟೋ ಆಲ್ಬಂ ಏರ್ಪಡಿಸುವುದು.
8. ಸಮಾರಂಭದಲ್ಲಿ ಪ್ರತಿಜ್ಞಾ ವಿಧಿ ಬೋಧಿಸುವುದು.
9. ಮಂಡಳಿಯಿಂದ ಮುದ್ರಿಸಲಾಗಿರುವ ಡಾ: ಮಹಾಂತಸ್ವಾಮಿಗಳ ಜೀವನಚರಿತ್ರೆ ಹಾಗೂ ಸಾಧನೆಗಳ ಕುರಿತ ಕಿರುಪುಸ್ತಕ ಹಾಗೂ ಮಡಿಕೆಪತ್ರಗಳನ್ನು ಮಂಡಳಿ ವತಿಯಿಂದ ವಿತರಿಸುವುದು.

## ಅನುಬಂಧ-2

### ಮದ್ಯಪಾನ, ಮಾದಕ ವಸ್ತು, ತಂಬಾಕು ವಸ್ತುಗಳ ವ್ಯಸನ ಮುಕ್ತಗೊಳಿಸುವ ಪ್ರತಿಜ್ಞಾ ವಿಧಿ

ಮದ್ಯಪಾನ, ಮಾದಕವಸ್ತು, ತಂಬಾಕು ವಸ್ತುಗಳ ಸೇವನೆಯು ನನಗೆ ಮತ್ತು ಮಾನವ ಸಮಾಜಕ್ಕೆ ಮಾರಕವೆಂದು, ಇದರಿಂದ ಮಾನವನ ದೇಹವಲ್ಲದೆ ಮನಸ್ಸು, ಕುಟುಂಬ ಸ್ವಾಸ್ಥ್ಯ, ಸಮಾಜ ಅನಾರೋಗ್ಯ ಪೀಡಿತವಾಗುತ್ತಿರುವುದು ಮತ್ತು ಗ್ರಾಮೀಣ ಹಾಗೂ ನಗರ ಪ್ರದೇಶದ ಯುವಜನತೆ ಇದರ ದಾಸ್ಯಕ್ಕೆ ಒಳಗಾಗುತ್ತಿರುವುದು ತಿಳಿದಿದೆ. ಇದರಿಂದ ಮಾನವನ ಆರ್ಥಿಕ, ಸಾಮಾಜಿಕ ಸ್ಥಿತಿ ಅಧೋಗತಿಗೆ ಇಳಿಯುತ್ತಿದೆ. ಆದ್ದರಿಂದ ಪೂಜ್ಯ ಮ.ನಿ.ಪ್ರ. ಡಾ: ಮಹಾಂತ ಶಿವಯೋಗಿ ಸ್ವಾಮೀಜಿಗಳ ಜನ್ಮದಿನದ ಈ ಶುಭದಿನದಂದು ನಾನು ಮದ್ಯಪಾನ, ಮಾದಕ ವಸ್ತು, ತಂಬಾಕು ವಸ್ತುಗಳನ್ನು ತ್ಯಜಿಸುತ್ತೇನೆ ಹಾಗೂ ಇನ್ನೆಂದಿಗೂ ಮುಟ್ಟುವುದಿಲ್ಲ ಎಂದು ಪ್ರತಿಜ್ಞಾ ವಿಧಿ ಕೈಗೊಳ್ಳುತ್ತೇನೆ.

ಶ್ರೀ ಗುರು ಬಸವಲಿಂಗಾಯ ನಮಃ

ಮಹಾಂತ ಜೋಳಿಗೆಯ ಹರಿಕಾರ - ಪರಮಪೂಜ್ಯ ಶ್ರೀ ಮ.ನಿ.ಪ್ರ ಡಾ. ಮಹಾಂತಸ್ವಾಮಿಗಳವರು, ಚಿತ್ತರಗಿ ಸಂಸ್ಥಾನ ಮಠ, ಇಲಕಲ್ಲ.
ಅವರ 92ನೇ ಜನ್ಮ ದಿನೋತ್ಸವದ ಸಂದರ್ಭದಲ್ಲಿ ಕರ್ನಾಟಕ ಸರಕಾರವು ಆಚರಿಸಲ್ಪಡುವ

# "ವ್ಯಸನಮುಕ್ತ ದಿನಾಚರಣೆ"

ವಿಶ್ವದ ವಿರಕ್ತ ಪೀಠ ಪರಂಪರೆಯಲ್ಲಿ ವಿಶಿಷ್ಟ ಜೋಳಿಗೆಯನ್ನು ಹಿಡಿದು ದುಡ್ಡು-ದುಗ್ಗಾಣಿ, ಧನ-ಕನಕ,ಕಾಳು-ಕಡಿ, ಆಸ್ತಿ-ಪಾಸ್ತಿ ಇತರ ಯಾವುದೇ ಭಿಕ್ಷೆಯನ್ನು ಬೇಡದೆ-ವ್ಯಕ್ತಿ, ಕುಟುಂಬ, ಸಮಾಜ, ನಾಡು, ದೇಶಗಳನ್ನು ಹಾಳು ಮಾಡುವಂತಹ ದುಶ್ಚಟ-ದುರ್ಗುಣ, ದುರ್ವ್ಯಸನಗಳನ್ನು, ಮೂಢನಂಬಿಕೆಗಳನ್ನು, ಕಂದಾಚಾರಗಳನ್ನು ತಮ್ಮ ಜೋಳಿಗೆಗೆ ಹಾಕಿಸಿಕೊಂಡ ಶಿವಾನುಭವ ಚರವರ್ಯ, ಅಭಿನವ ಚನ್ನಬಸವಣ್ಣನ ಅವತಾರಿ, ಮಹಾಂತ ಜೋಳಿಗೆಯ ಹರಿಕಾರ, ಬಸವತತ್ವ ಚಿಂತನಶೀಲ ಪರಮಪೂಜ್ಯ ಶ್ರೀ ಮ.ನಿ.ಪ್ರ. ಡಾ. ಮಹಾಂತಸ್ವಾಮಿಗಳವರು ಈ ನಾಡಿನ ಪುಣ್ಯವೇ ಆಗಿದ್ದರು. ನಿಜಧರ್ಮ, ತತ್ವಸಿದ್ಧಾಂತ, ಆಚರಣೆ ಹಾಗೂ ಅನುಷ್ಠಾನಗಳನ್ನು ಮೈಗೂಡಿಸಿಕೊಂಡು ಪ್ರಜ್ಞಾವಂತ ಜಾಗೃತ ಮನಸ್ಸಿನ ಪೂಜ್ಯರ ಸಾಲಿನಲ್ಲಿ ನಿಲ್ಲುವ ಡಾ. ಮಹಾಂತ ಶ್ರೀಗಳವರು ವೈಚಾರಿಕ, ವೈಜ್ಞಾನಿಕ, ವೈವಿಧ್ಯಮಯ ಮತ್ತು ವೈಶಿಷ್ಟತೆಗಳಿಂದೊಡಗೂಡಿದ ಚಿಂತನೆಯ ತಳಹದಿಯ ಮೇಲೆ ಸಮಾಜವನ್ನು ತಿದ್ದಿತೀಡಿದವರು.

ದಿನಾಂಕ 01.08.1930ರಂದು ಪರಮಪೂಜ್ಯ ಶ್ರೀ ಮ.ನಿ.ಪ್ರ ಡಾ. ಮಹಾಂತ ಶ್ರೀಗಳವರು ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಹಿಪ್ಪರಗಿ ಗ್ರಾಮದಲ್ಲಿ ಶರಣ ದಂಪತಿಗಳಾದ ಶ್ರೀ ಮಹಾಂತಯ್ಯ ಹಾಗೂ ಮಾತೋಶ್ರೀ ನೀಲಮ್ಮ ಅವರ ಪುಣ್ಯ ಗರ್ಭದಲ್ಲಿ ಜನಿಸಿದರು. ಮುಧೋಳ, ಜಮಖಂಡಿ, ಶಿವಯೋಗಮಂದಿರ ಹಾಗೂ ಕಾಶಿಯಲ್ಲಿ ಅಧ್ಯಯನಗೈದ ಪೂಜ್ಯರು ಮೊದಲು ಸವದಿಯ ಶ್ರೀ ಸಂಗನಬಸವೇಶ್ವರ ಮಠಕ್ಕೆ ಅಧಿಪತಿಗಳಾಗಿ ನಂತರ ದಿನಾಂಕ 17.05.1970ರಲ್ಲಿ ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಮಠದ ಪೀಠಾಧಿಕಾರಿಗಳಾದರು.

ಮಾತೃಹೃದಯಿಗಳಾದ ಡಾ. ಮಹಾಂತಶ್ರೀಗಳವರು ಆರೋಗ್ಯವಂತ ಸಮಾಜ ನಿರ್ಮಾಣದಲ್ಲಿ ಶರಣತತ್ವ ಅಥವಾ ಬಸವತತ್ವದ ಅನುಷ್ಠಾನದ ಸಂದರ್ಭದಲ್ಲಿ ರಾಜಿ ಮಾಡಿಕೊಂಡವರಲ್ಲ. ಗಟ್ಟಿ ಮನಸ್ಸು-ದಿಟ್ಟ ನಿಲವು, ಆಡಿದ್ದನ್ನು ಮಾಡುವ ಮಾಡುವುದನ್ನೆ ಆಡುವ ವಾಸ್ತವವಾದಿಗಳು. ಬೆಟ್ಟದಂತಹ ಸಮಸ್ಯೆಗಳನ್ನು ಮಂಜಿನಂತೆ ಕರಗಿಸಿ ಜನ-ಮನಗೆದ್ದ ಪೂಜ್ಯರು ಆಡುವ ಮಾತು ಮೃದು, ಪ್ರಸಂಗ ಬಂದಲ್ಲಿ ತೆಗೆದುಕೊಳ್ಳುವ ನಿರ್ಧಾರ ವಜ್ರದಂತೆ ಕಠಿಣ. ಧರ್ಮದ ಮೂಲಕ ದಯೆ, ಕರುಣೆ, ಪ್ರೀತಿ, ನಂಬಿಕೆ, ವಿಶ್ವಾಸ, ಸಮಾನತೆ, ಸಹಕಾರ, ಸಹಬಾಳ್ವೆಯಂತಹ ಮೂಲ ಆಶಯಗಳನ್ನು ಮೈಗೂಡಿಸಿಕೊಂಡವರು. ಸಹಜತೆ, ಸರಳತೆ, ನಿರಾಡಂಬರಗಳು ಸದಾ ಇವರ ಸುತ್ತ ಗಿರಕಿ ಹೊಡೆಯುತ್ತಿದ್ದವು. ಸಮಾಜೋ-ಧಾರ್ಮಿಕ ಕೈಂಕರ್ಯದಲ್ಲಿ ತಮ್ಮ ಸಂಪೂರ್ಣ ಜೀವನ ಕಳೆದ ಪೂಜ್ಯರಿಗೆ ಕರ್ನಾಟಕ ಮದ್ಯಪಾನ ಸಂಯಮ ಮಂಡಳಿಯು "ಸಂಯಮ" ಪ್ರಶಸ್ತಿ ನೀಡಿದರೆ, ಕರ್ನಾಟಕ ವಿಶ್ವವಿದ್ಯಾಲಯ "ಗೌರವ ಡಾಕ್ಟರೇಟ್" ಪದವಿ ನೀಡಿತು. ಕರ್ನಾಟಕ ಸರಕಾರ ನೀಡುವ ಅತ್ಯುನ್ನತ ಪ್ರಶಸ್ತಿ" ಬಸವಶ್ರೀ" ಪ್ರಶಸ್ತಿಯು ಪೂಜ್ಯರನ್ನು ಅರಸಿ ಬಂದಿತು. ಬಸವತತ್ವ ಪರಿಪಾಲಕರಾದ ಪೂಜ್ಯರು ಶ್ರೀಮಠದ ಅಧಿಕಾರ ವಹಿಸಿಕೊಂಡಾಗಿನಿಂದ ಹಿಡಿದು 48 ವರ್ಷಕಾಲ ದಣಿವರಿಯದೇ ದುಡಿದಿದ್ದಾರೆ. ಅಂತೆಯೆ ಅವರ ಜೀವಿತ ಕಾಲದಲ್ಲಿ ಸರಕಾರ ಅವರ ಜನ್ಮ ದಿನವನ್ನು "ವ್ಯಸನಮುಕ್ತ ದಿನ" ಎಂದು ಘೋಷಣೆ ಮಾಡಿತು ಮತ್ತು ಅಥಣಿ ತಾಲೂಕಿನ ಮಲಾಬಾದಿನ "ವಿಮೋಚನ ದೇವದಾಸಿ ಪುನರ್ವಸತಿ ಸಂಘ"ದ ಶಾಲೆಯ ಆವರಣದಲ್ಲಿ ಅವರ ಪುತ್ಥಳಿ ಅನಾವರಣ ಅವರ ಸಾನಿಧ್ಯದಲ್ಲಿಯೇ ಆಯಿತು. ಇಂತಹ ಮಹಾಮಹಿಮರು ಕೈಗೊಂಡ ಕಾರ್ಯಗಳು ಅಗಣಿತ. ಅವುಗಳಲ್ಲಿ ಒಂದಷ್ಟನ್ನು ನೋಡುವುದಾದರೆ-

1. ಚಿತ್ತರಗಿ ಪೀಠದ 63 ಶಾಖಾಮಠಗಳ ಜೀರ್ಣೋದ್ಧಾರ.
2. ಶರಣ ಸಿದ್ಧಾಂತ ವಿದ್ಯಾ ಪೀಠ ಸ್ಥಾಪನೆ
3. ವಿನೂತನ ಮಹಾಂತ ಜೋಳಿಗೆ
4. ಶ್ರೀ ಬಸವೇಶ್ವರ ವಚನ ಪಾಠ ಶಾಲೆ ಪ್ರಾರಂಭ
5. ಶ್ರೀಮಠದ ಗದ್ದುಗೆಯ ಮೇಲೆ ವಚನ ಗ್ರಂಥಗಳು
6. ವಚನ ಸಾಹಿತ್ಯ ತೇರು – ಮತ್ತು ಪಲ್ಲಕ್ಕಿ ಉತ್ಸವ (ವೈಚಾರಿಕ ತಳಹದಿ ಮೇಲೆ)
7. ಜಾತ್ರಾ ಮಹೋತ್ಸವದ ಹಬ್ಬ ಶರಣ ಸಂಸ್ಕೃತಿ ಉತ್ಸವಗಳ ಆಚರಣೆ
8. ಹಾಲು ಕುಡಿಯುವ ಹಬ್ಬ (ವೈಚಾರಿಕ ನಾಗ ಪಂಚಮಿ)
9. ಬಸವ ಕೇಂದ್ರ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ
10. ಮನೆಯಲ್ಲಿ ಮಹಾಮನೆ-ವಚನ ಚಿಂತನ ಗೋಷ್ಠಿ

ಮುಂದುವರೆದಿದೆ-2

11. ನೂತನ ಮನೆಗಳ ಗುರು ಪ್ರವೇಶ ಸಮಾರಂಭ
12. ಬಸವ ತತ್ವಾಧಾರಿತ ಸರಳ ಕಲ್ಯಾಣ ಮಹೋತ್ಸವ
13. ಜಂಗಮ ಮಹಾದಾಸೋಹ ನಿಧಿ ಯೋಜನೆ
14. ಲಿಂಗವಂತ ಕಾಯಕ ಸಂಜೀವಿನಿ ಸಂಸ್ಥೆ
15. ಶ್ರೀ ವಿಜಯ ಮಹಾಂತೇಶ ಧರ್ಮ ಪ್ರಸಾರಕ ಮಂಡಳ
16. ಲಿಂಗವಂತ ಧರ್ಮಗ್ರಂಥ ಬಹುಮಾನ ಯೋಜನೆ
17. ಬಸವಗುರು ಕಾರುಣ್ಯ ಪ್ರಶಸ್ತಿ ಯೋಜನೆ ಆರಂಭ
18. ವಚನ ಗ್ರಂಥ ಪ್ರಕಟಣೆ ಪ್ರಸಾರ ಯೋಜನೆ
19. ಸುಮಾರು 5ಲಕ್ಷ ಉಚಿತ ಲಿಂಗಧಾರಣೆ
20. "ಬಸವಬೆಳಗು" ಪತ್ರಿಕೆ ಪ್ರಾರಂಭ (ತ್ರೈಮಾಸಿಕ)
21. ವಿಮೋಚನಾ ದೇವದಾಸಿ ಪುನರ್ವಸತಿ ಕೇಂದ್ರ ಸ್ಥಾಪನೆ
22. ಶಾಖಾ ಮಠಗಳಿಗೆ ಜಂಗಮೇತರ ಮತ್ತು ದಲಿತ ವಟುಗಳಿಗೆ ಉತ್ತರಾಧಿಕಾರಿ ನೇಮಕ
23. ವರದಕ್ಷಿಣೆ ವಿರುದ್ಧ ಹೋರಾಟ
24. ಬರಗಾಲದಲ್ಲಿ ಗಂಜಿಕೇಂದ್ರ ಸ್ಥಾಪನೆ
25. ನೆರೆಹಾವಳಿಯಲ್ಲಿ ಬಟ್ಟೆ, ಪ್ರಸಾದ ಅವಶ್ಯಕ ಸಾಮಾನುಗಳ ಪೂರೈಕೆ
26. ಎಲ್ಲ ಶುಭಕಾರ್ಯಗಳಲ್ಲಿ ಮಾತೃಭಾಷೆಗೆ ಮನ್ನಣೆ
27. ಜೀವನ ಪರ್ಯಂತ ವಚನ ಸಾಹಿತ್ಯ ಪ್ರಸಾರ
28. ಸ್ತ್ರೀ ಶಿಕ್ಷಣಕ್ಕೆ ಒತ್ತು
29. ಮಹಿಳಾ ಸಬಲೀಕರಣಕ್ಕೆ ಒತ್ತು
30. ಸಮಾಜದಲ್ಲಿ ಲಿಂಗ ಸಮಾನತೆ ಹಾಗೂ ಜಾತಿ ಸಮಾನತೆ ಸಾಧಿಸಿದ ಪೂಜ್ಯರು.

ಶ್ರೀ ಸಂಗಣ್ಣ ಗದ್ದಿ.
ಮುಖ್ಯ ಗುರುಗಳು,
ಎಸ್.ಆರ್. ಕಂಠಿ ಬಾಲಕಿಯರ ಪ್ರೌಢಶಾಲೆ, ಇಲಕಲ್ಲ.